# ಕರ್ನಾಟಕ ಸರ್ಕಾರ
## ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ/ನ್ಯಾಕ್/10/ನೋಟೀಸ್/2022-23

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಉನ್ನತ ಶಿಕ್ಷಣ ಸೌಧ, ಶೇಷಾದ್ರಿ ರಸ್ತೆ,
ಬೆಂಗಳೂರು, ದಿ: 24.02.2022

**ನೋಟೀಸ್**

ವಿಷಯ: 2021-22ನೇ ಸಾಲಿನಲ್ಲಿಅನುದಾನ ಬಿಡುಗಡೆ ಮಾಡಿರುವ ಕಾಲೇಜುಗಳು ನ್ಯಾಕ್ ಮೌಲ್ಯಮಾಪನ / ಮರುಮೌಲ್ಯಮಾಪನ ಪ್ರಕ್ರಿಯೆಯ ಹಂತಗಳನ್ನು ಇದುವರೆಗೂ ಪ್ರಾರಂಭಿಸದಿರುವ ಕುರಿತು.

ಉಲ್ಲೇಖ:
1. ಈ ಕಛೇರಿಯ ಸಮಸಂಖ್ಯೆಯ ಅಧಿಕೃತ ಜ್ಞಾಪನದ ದಿ: 23.03.2022.
2. ಈ ಕಛೇರಿ ನ್ಯಾಕ್ ಅನುದಾನ ಬಿಡುಗಡೆ ಆದೇಶದ ದಿ: 22.03.2022 ಹಾಗೂ 30.03.2022.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (2) ರ ಈ ಕಛೇರಿಯ ಸಮಸಂಖ್ಯೆ ಆದೇಶಗಳಲ್ಲಿ ನ್ಯಾಕ್ ಮೌಲ್ಯಮಾಪನ / ಮರುಮೌಲ್ಯಮಾಪನ ಪ್ರಕ್ರಿಯೆಗೆ ಒಳಪಡಲಿರುವ ಒಟ್ಟು 215 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಸಿ.ಟಿ.ಎಸ್- 8 ಮುಖಾಂತರ ಅನುದಾನವನ್ನು ಬಿಡುಗಡೆ ಮಾಡಲಾಗಿದ್ದು, ಉಲ್ಲೇಖ(1)ರ ಈ ಕಛೇರಿಯ ಅಧಿಕೃತ ಜ್ಞಾಪನದಲ್ಲಿ ಈ ಕೆಳಕಂಡಂತೆ ಷರತ್ತುಗಳನ್ನು ವಿಧಿಸಲಾಗಿತ್ತು.

1. ನ್ಯಾಕ್ ಪ್ರಕ್ರಿಯೆಯ 3 ಹಂತಗಳಾದ ಐ.ಐ.ಕ್ಯೂ.ಎ, ಎಸ್.ಎಸ್.ಆರ್. ಶುಲ್ಕ, ಲಾಜಿಸ್ಟಿಕ್ ಶುಲ್ಕಗಳನ್ನು ನ್ಯಾಕ್ ಸಂಸ್ಥೆಗೆ ಸಕಾಲದಲ್ಲಿ ಯಾವುದೇ ವಿಳಂಬವಿಲ್ಲದೆ ಪಾವತಿಸಬೇಕು.
2. ನ್ಯಾಕ್ ಅನುದಾನದ ಮೊತ್ತ ಕಾಲೇಜಿನ ಐ.ಕ್ಯೂ.ಎ.ಸಿ. / ಪ್ರಾಂಶುಪಾಲರ ಖಾತೆಗೆ ಜಮೆಯಾದ 10 ದಿನದೊಳಗಾಗಿ ಐ.ಐ.ಕ್ಯೂ.ಎ.ಯನ್ನು ನ್ಯಾಕ್ ಸಂಸ್ಥೆಗೆ ಸಲ್ಲಿಸಬೇಕು.
3. ಕಾಲೇಜಿನ ನ್ಯಾಕ್ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೂ ಎಲ್ಲಾ ಬೋಧಕ/ ಬೋಧಕೇತರ ಸಿಬ್ಬಂದಿಗಳು ತಮಗೆ ವಹಿಸಿರುವ ಕೆಲಸ ಕಾರ್ಯಗಳನ್ನು ಸಮರ್ಥವಾಗಿ ನಿರ್ವಹಿಸುವಂತೆ ನೋಡಿಕೊಳ್ಳಬೇಕು.
4. ನ್ಯಾಕ್ ಪ್ರಕ್ರಿಯೆಯ ಸಂಪೂರ್ಣ ಜವಾಬ್ದಾರಿಯನ್ನು ಪ್ರಾಂಶುಪಾಲರು, ಐ.ಕ್ಯೂ.ಎ.ಸಿ. ಕೋ-ಆರ್ಡಿನೇಟರ್ ಹಾಗೂ ಕೋ-ಕೋ ಆರ್ಡಿನೇಟರ್‌ಗಳೊಂದಿಗೆ ವಹಿಸಿಕೊಂಡು, ಈ ಮೂಲಕ ಕಾಲೇಜುಗಳು ಉತ್ತಮ ನ್ಯಾಕ್ ಶ್ರೇಣಿಯನ್ನು ಪಡೆಯುವಲ್ಲಿ ಶ್ರಮಿಸಬೇಕೆಂದು ಸೂಚಿಸಲಾಗಿತ್ತು.

ಆದರೆ ಇದುವರೆಗೂ ಈ ಕೆಳಕಂಡ ಕಾಲೇಜುಗಳು ಐ.ಐ.ಕ್ಯೂ.ಎ, ಹಾಗೂ ಅದರ ಶುಲ್ಕವನ್ನು ನ್ಯಾಕ್ ಸಂಸ್ಥೆಗೆ ಸಕಾಲದಲ್ಲಿ ಸಲ್ಲಿಸದೇ ಮೇಲ್ಕಾಣಿಸಿರುವ ಯಾವುದೇ ಷರತ್ತುಗಳನ್ನು ಪಾಲಿಸದೇ ವಿಳಂಬ ಮಾಡುತ್ತಿರುವುದು ಕಂಡುಬರುತ್ತಿದೆ. ಕಾಲೇಜುಗಳನ್ನು ಉನ್ನತ ದರ್ಜೆಯ ಶ್ರೇಣಿಗೆ ತರುವುದು ಅಗತ್ಯವಿರುವುದರಿಂದ ಹಾಗೂ ಜೂನ್ 2022 ರಿಂದ ನ್ಯಾಕ್ ಮೌಲ್ಯಮಾಪನ ಪ್ರಕ್ರಿಯೆಯ ಮ್ಯಾನ್ಯುಯಲ್ ನಲ್ಲಿ ಬದಲಾವಣೆಯಾಗಲಿದ್ದು ಮೌಲ್ಯಮಾಪನ ವರ್ಷ ಕೂಡ ಬದಲಾಗುತ್ತಿರುವುದರಿಂದ ಈ ಬಗ್ಗೆ ಈ ಹಿಂದೆ ಹಲವು ಬಾರಿ ವೀಡಿಯೋ ಕಾನ್ಫರೆನ್ಸ್ ಮೂಲಕ ತಮಗೆ ತಿಳಿಸಲಾಗಿತ್ತು. ಆದರೂ ಸಹ ತಾವು ಈ ವಿಷಯದಲ್ಲಿ ಉದಾಸೀನತೆ ತೋರುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಲಾಗಿದೆ.

..........2

ನ್ಯಾಕ್ ಮೌಲ್ಯಮಾಪನ / ಮರುಮೌಲ್ಯಮಾಪನ ಪ್ರಕ್ರಿಯೆಯ ಹಂತಗಳನ್ನು ಪ್ರಾರಂಭಿಸುವುದಕ್ಕೆ ಸಂಬಂಧಿಸಿದಂತೆ ಕೂಡಲೇ ಕ್ರಮ ಕೈಗೊಂಡು ಕೈಗೊಂಡಿರುವ ಕ್ರಮದ ಬಗ್ಗೆ ಮಾಹಿತಿಯನ್ನು ಹಾಗೂ ಈ ರೀತಿಯ ವಿಳಂಬಕ್ಕೆ ಕಾರಣವೇನು? ಎಂಬ ಬಗ್ಗೆ ಸಮಜಾಯಿಷಿಯನ್ನು ದಿನಾಂಕ: 26.05.2022 ರೊಳಗಾಗಿ ಈ ಕಛೇರಿಗೆ ಸಲ್ಲಿಸುವಂತೆ ಕಟ್ಟುನಿಟ್ಟಾಗಿ ಸೂಚಿಸಲಾಗಿದೆ. ತಪ್ಪಿದಲ್ಲಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ಪ್ರಕಾರ ನಿಮ್ಮ ವಿರುದ್ಧ ನಿಯಮಾನುಸಾರ ಶಿಸ್ತುಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಲಾಗಿದೆ.

ಕಾಲೇಜು ಶಿಕ್ಷಣ ನಿರ್ದೇಶಕರು

**ಇವರಿಗೆ:**

1. ಪ್ರಾಂಶುಪಾಲರು. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಿಕ್ಕನಾಯಕನಹಳ್ಳಿ -572214
2. ಪ್ರಾಂಶುಪಾಲರು. ಸರ್ಕಾರಿ ಪ್ರಥಮ ದರ್ಜೆ ಕಾಲೇಜು,ಮಂಕಿ – 581 348 ಹೊನ್ನಾವರ ತಾ.
3. ಪ್ರಾಂಶುಪಾಲರು. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತಿಳುವಳ್ಳಿ, ಹಾನಗಲ್ ತಾ.
4. ಪ್ರಾಂಶುಪಾಲರು. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಾದಾಮಿ – 587 201
5. ಪ್ರಾಂಶುಪಾಲರು. ಶ್ರೀ ಬೆನಕಪ್ಪ ಶಂಕರಪ್ಪ ಸಿಂಹಾಸನದ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗಜೇಂದ್ರಗಡ-582114.
6. ಪ್ರಾಂಶುಪಾಲರು. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಾಜಾನಗರ, ಹುಬ್ಬಳ್ಳಿ – 580 032
7. ಪ್ರಾಂಶುಪಾಲರು. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಿರಸಿ – 581 401
8. ಪ್ರಾಂಶುಪಾಲರು. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮುದಗಲ್ – 584 125, ಲಿಂಗಸೂಗೂರು ತಾ.
9. ಪ್ರಾಂಶುಪಾಲರು. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊಪ್ಪಳ – 583 231
10. ಪ್ರಾಂಶುಪಾಲರು. ಸರ್ಕಾರಿ ಮಹಾವಿದ್ಯಾಲಯ, ಸಿಂಧನೂರು – 584 128
11. ಪ್ರಾಂಶುಪಾಲರು. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಜಾಲಹಳ್ಳಿ – 584 116, ದೇವದುರ್ಗ ತಾ.
12. ಪ್ರಾಂಶುಪಾಲರು. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮನಹಳ್ಳಿ – 585 430, ಬೀದರ್ ತಾ.ಜಿ.
13. ಪ್ರಾಂಶುಪಾಲರು. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಇರಕಲಗಡ – 583 237, ಕೊಪ್ಪಳ ತಾ.ಜಿ.
14. ಪ್ರಾಂಶುಪಾಲರು. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸೇಡಂ – 585 222.
15. ಪ್ರಾಂಶುಪಾಲರು. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಯಲಬುರ್ಗಾ – 583 236.
16. ಪ್ರಾಂಶುಪಾಲರು. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಂಡೂರು – 583 119.
17. ಪ್ರಾಂಶುಪಾಲರು. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸುರಪುರ – 585 224
18. ಪ್ರಾಂಶುಪಾಲರು. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬೀದರ್ – 585 401
19. ಪ್ರಾಂಶುಪಾಲರು. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಯಾದಗಿರಿ – 585 202
20. ಪ್ರಾಂಶುಪಾಲರು. ಗಂಗಾವತಿ ವೆಂಕಟರಮಣಶೆಟ್ಟಿ ಪದ್ಮಾವತಮ್ಮ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಗರಿಬೊಮ್ಮನಹಳ್ಳಿ – 583 212.
21. ಪ್ರಾಂಶುಪಾಲರು. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಾಣಿಯೂರು – 574 328, ಪುತ್ತೂರು ತಾ.
22. ಪ್ರಾಂಶುಪಾಲರು. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಪುತ್ತೂರು – 574 201
23. ಪ್ರಾಂಶುಪಾಲರು. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಿರಿಯಡಕ – 576 113, ಉಡುಪಿ ತಾ.ಜಿ.
24. ಪ್ರಾಂಶುಪಾಲರು. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಥಬೀದಿ, ಮಂಗಳೂರು – 575 001
25. ಪ್ರಾಂಶುಪಾಲರು. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೋಟ ಪಡುಕರೆ – 576 221, ಉಡುಪಿ ತಾ.ಜಿ.
26. ಪ್ರಾಂಶುಪಾಲರು. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಾರ್ಕಳ – 574 104

..........3

27. ಪ್ರಾಂಶುಪಾಲರು. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬೆಟ್ಟಂಪಾಡಿ – 574 259, ಪುತ್ತೂರು ತಾ.
28. ಪ್ರಾಂಶುಪಾಲರು. ಐ.ಡಿ.ಎಸ್.ಜಿ. ಸರ್ಕಾರಿ ಮಹಾವಿದ್ಯಾಲಯ, ಚಿಕ್ಕಮಗಳೂರು – 577 102
29. ಪ್ರಾಂಶುಪಾಲರು. ಸರ್ ಎಂ.ವಿಶ್ವೇಶ್ವರಯ್ಯ ಸರ್ಕಾರಿ ಕಲಾ ಮತ್ತು ವಾಣಿಜ್ಯ ಕಾಲೇಜು, ನ್ಯೂ ಟೌನ್, ಭದ್ರಾವತಿ-577 301

**ಪ್ರತಿಯನ್ನು :**

1. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಶಿವಮೊಗ್ಗ, ಧಾರವಾಡ, ಕಲಬುರ್ಗಿ ಮತ್ತು ಮಂಗಳೂರು - ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
2. ಮಾಹಿತಿ ಅಧಿಕಾರಿಗಳು, ಕೇಂದ್ರ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು - ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.
3. ಕಛೇರಿ ಪ್ರತಿ.
4. ಹೆಚ್ಚುವರಿ ಪ್ರತಿ